SE – 003

ಮೊದಲನೇ ಸೆಮಿಸ್ಟರ್ ಬಿ.ಕಾಂ./ಬಿ.ಕಾಂ. (ರೀಟೇಲ್ ಆಪರೇಷನ್ಸ್)/ಬಿ.ಕಾಂ. (ಬ್ಯಾಂಕಿಂಗ್)/
ಬಿ.ಕಾಂ. (ಲಾಜಿಸ್ಟಿಕ್ಸ್) ಪರೀಕ್ಷೆ, ಜನವರಿ 2025

VISWA CHETHANA DEGREE COLLEGE Anekal - 562106

(SEP 2024 – 25)

ಕನ್ನಡ ಭಾಷಾ ಪಠ್ಯ ಪತ್ರಿಕೆ – 1

ವಾಣಿಜ್ಯ ಕನ್ನಡ – 1

Time : 3 Hours | Max. Marks : 80

I. ಐದು ಪ್ರಶ್ನೆಗಳಿಗೆ ಉತ್ತರಿಸಿ. (**100** ಪದಗಳನ್ನು ಮೀರದಂತೆ) **(5×5=25)**

1) ಭಾಷೆಯ ನಡುವಿನ ಬಾಂಧವ್ಯವನ್ನು 'ಕಾಣಿಕೆ' ಪದ್ಯದ ಹಿನ್ನೆಲೆಯಲ್ಲಿ ವಿವರಿಸಿ.

2) ಪ್ರತಿಮೆಗಳು ಪರಸ್ಪರ ಪ್ರೀತಿಯನ್ನು ಕಲಿಸುವುದು ಹೇಗೆ ? ಲೇಖಕರ ಅಭಿಪ್ರಾಯದೊಂದಿಗೆ ವಿವರಿಸಿ.

3) ಜಾಗತೀಕರಣ ಎನ್ನುವುದು ಯುರೋಪಿನ ಬಿಳಿಯ ಜನಾಂಗದ ಕುತಂತ್ರವೇ ? ವಿವರಿಸಿ.

4) ಆರ್ಥಿಕ ನೀತಿ ಮತ್ತು ನಿರುದ್ಯೋಗದ ನಡುವಣ ಸಂಬಂಧಗಳನ್ನು ಕುರಿತು ಬರೆಯಿರಿ.

5) ಯಾವುದಾದರೂ ಮೂರು ರೀಟೇಲ್ ವ್ಯಾಪಾರಗಳ ಸಾಧಕ-ಬಾಧಕಗಳನ್ನು ವಿವರಿಸಿ.

6) ಧಾರ್ಮಿಕ ಮನೋನಿಯಂತ್ರಣದ ಬಗ್ಗೆ ವಿವರಿಸಿ.

7) ನಮ್ಮ ಉನ್ನತ ಶಿಕ್ಷಣದ ಆದ್ಯತೆಗಳು ಯಾವುವು ಆಗಿರಬೇಕೆಂದು ಲೇಖಕರು ಹೇಳುತ್ತಾರೆ ?

II. ಮೂರು ಪ್ರಶ್ನೆಗಳಿಗೆ ಉತ್ತರಿಸಿ. (**200** ಪದಗಳು ಮೀರದಂತೆ) **(3×10=30)**

1) ''ಕತೆಗಳಿಗೆ ವ್ಯಾಖ್ಯಾನ ಬೇಡ. ವ್ಯಾಖ್ಯಾನ ಮಾಡುವುದು ಅಪರಾಧ'' ಕತೆಯ ಓದಿನ ಕುರಿತು ಲೇಖಕರ ನಿಲುವನ್ನು ತಿಳಿಸಿ.

2) ಶಿಕ್ಷಣದಲ್ಲಿ ಕನ್ನಡ ಭಾಷೆಯ ಮಹತ್ವವನ್ನು ಕುರಿತು ಬರೆಯಿರಿ.

3) ಕರ್ನಾಟಕ ಗ್ರಾಮೀಣ ಆರ್ಥಿಕತೆಯ ಎರಡು ಸಂಸ್ಥೆಗಳ ಕಾರ್ಯನಿರ್ವಹಣೆಯ ಬಗ್ಗೆ ಬರೆಯಿರಿ.

4) ಗಾಂಧೀಜಿಯವರ ವಸ್ತ್ರದಹನ ಹಾಗೂ ಅಸಹಕಾರ ಚಳುವಳಿಯ ಹಿಂದಿನ ಉದ್ದೇಶವೇನು ? ವಿವರಿಸಿ.

P.T.O.

III. ಕೆಳಗಿನ ಗದ್ಯಭಾಗವನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ ಬರೆದು ಸೂಕ್ತ ಶೀರ್ಷಿಕೆ ನೀಡಿರಿ. **(1×5=5)**

ಖಾಸಗೀಕರಣ ನೀತಿ ಜಾರಿಗೆ ಬಂದ ನಂತರ 60-70ರ ದಶಕಗಳಲ್ಲಿ ಸಾರ್ವಜನಿಕ ಸಂಪನ್ಮೂಲದ ಹಲವು ಪಬ್ಲಿಕ್ ಸೆಕ್ಟರ್ ಉದ್ದಿಮೆಗಳನ್ನು ಅತ್ಯಂತ ಕಡಿಮೆ ಬೆಲೆಗೆ ಖಾಸಗಿಯವರಿಗೆ ಮಾರುವ ಕೆಲಸ ನಡೆದಿದೆ. ನಮ್ಮೆಲ್ಲರ ಬೆವರಿನ (ತೆರಿಗೆ) ಹಣದಿಂದ ಸೃಷ್ಟಿಸಿದ ಸಂಪನ್ಮೂಲಗಳನ್ನು ಕೆಲವೇ ಕೆಲವು ವ್ಯಕ್ತಿಗಳ ಸ್ವಾಧೀನಕ್ಕೆ ನೀಡಲಾಗಿದೆ. ಖಾಸಗಿ ಬಂಡವಾಳಿಗರನ್ನು ಪ್ರೋತ್ಸಾಹಿಸಲು ತೆರಿಗೆ ದರವನ್ನು ಕಡಿತಗೊಳಿಸಲಾಗಿದೆ. 1990ರ ಹಿಂದೆ ನೇರ ತೆರಿಗೆ ದರ ಶೇ. 50ಕ್ಕಿಂತಲೂ ಹೆಚ್ಚಿತ್ತು . ಇಂದು ಅದನ್ನು ಶೇ. 30ಕ್ಕೆ ಇಳಿಸಲಾಗಿದೆ. ಅಷ್ಟು ಮಾತ್ರವಲ್ಲ, ಈ ಶೇ. 30 ಕೂಡ ಹೆಚ್ಚು ಎನ್ನುವ ಉದ್ದಿಮೆಗಳ ಕೂಗಿಗೆ ಬೆಲೆ ಕೊಟ್ಟು ಅವುಗಳ ಆದಾಯದ ಮೇಲಿನ ತೆರಿಗೆಯನ್ನು ಶೇ. 25ಕ್ಕೆ ಇಳಿಸಲು ಸರ್ಕಾರ ನಿರ್ಧರಿಸಿದೆ. ಖಾಸಗೀಕರಣ ಪ್ರಕ್ರಿಯೆ ಆರಂಭವಾದ ನಂತರ ಕಾರ್ಮಿಕ ಕಾಯಿದೆಗಳಿಗೆ ತಿದ್ದುಪಡಿ ತರುವ ಪ್ರಕ್ರಿಯೆ ಆರಂಭವಾಗಿದೆ. ಈ ತಿದ್ದುಪಡಿಗಳ ಮೂಲಕ ಗುತ್ತಿಗೆ, ಹೊರಗುತ್ತಿಗೆ, ತಾತ್ಕಾಲಿಕ, ಅರೆಕಾಲಿಕ ಕಾರ್ಮಿಕ ಪದ್ಧತಿಗಳು ಜಾರಿಗೆ ಬಂದಿವೆ.

ಉದ್ದಿಮೆಗಳಿಗೆ ಹಣಕಾಸು ಪೂರೈಸಲು ಸರಕಾರ ಸಾಲ ನೀಡುವ ನೀತಿಯನ್ನು ಈಗಾಗಲೇ ಬದಲಾಯಿಸಿಕೊಂಡಿದೆ. ಅಂದರೆ ಬ್ಯಾಂಕು, ಸೊಸೈಟಿ, ಹಣಕಾಸು ಸಂಸ್ಥೆ ಮುಂತಾದವುಗಳು ನೀಡುವ ಸಂಘಟಿತ ಸಾಲದ ಬಹುಭಾಗ ಉದ್ದಿಮೆಗಳಿಗೆ ಹೋಗುವಂತೆ ಸಾಲ ನೀತಿಯನ್ನು ರೂಪಿಸಲಾಗಿದೆ. ಇದೇ ರೀತಿಯಲ್ಲಿ ಲಿಂಗ ತಾರತಮ್ಯ ಕೂಡ ಬಲಾಢ್ಯರ ಧೋರಣೆಯನ್ನು ಮುಂದುವರೆಸಲು ಸಹಕರಿಸುತ್ತದೆ.

IV. ಸಂಕ್ಷೇಪಿಸಿದ ಭಾಗ ಆಧರಿಸಿ ಎರಡು ಪ್ರಶ್ನೆಗಳನ್ನು ರೂಪಿಸಿ. **(2×1=2)**

V. ಇವುಗಳಲ್ಲಿ **ಎರಡು** ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ. **(2×2=4)**

1) ಜೈವಿಕ ಸಮರ
2) ಪ್ರತಿಮೆಗಳು
3) ದೇಸೀ ಶಿಕ್ಷಣ
4) ಪ್ರಜಾಪ್ರಭುತ್ವ.

VI. ನಿಮ್ಮ ವ್ಯಾಸಂಗ ಪತ್ರ ಕೋರಿ ಕಾಲೇಜಿನ ಪ್ರಾಂಶುಪಾಲರಿಗೆ ಒಂದು ಪತ್ರ ಬರೆಯಿರಿ. **(1×5=5)**

VII. ಇವುಗಳಲ್ಲಿ **ನಾಲ್ಕು** ಪದಗಳಿಗೆ ಅರ್ಥ ಬರೆಯಿರಿ. **(4×1=4)**

1) ಕೋಡು
2) ಹುರುಳು
3) ಕಳೆ
4) ಬೈಲಾ
5) ಪಡುವಣ
6) ಝುನ್

VIII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರುತಿಸಿ ಬರೆಯಿರಿ. (**ಎಲ್ಲಾ ಐದು** ಪ್ರಶ್ನೆಗಳಿಗೆ ಉತ್ತರಿಸಿ) **(5×1=5)**

1) ಡಿಜಿಟಲ್ ಡಿವೈಡ್ ಎಂದರೇನು ?

ಅ) ಅಂಕಗಳ ಅಂತರ
ಆ) ಅಂಕಿಗಳ ಅಂತರ
ಇ) ಕಂಪ್ಯೂಟರ್‌ಗಳ ಅಂತರ
ಈ) ಕಂಪ್ಯೂಟರ್ ಸಾಕ್ಷರತೆಯ ಅಂತರ

2) ಮಹಾಕಾದಂಬರಿಕಾರ ದಾಸ್ತಾವೆಸ್ಕಿ ಯಾವ ದೇಶದವನು ?

ಅ) ಅಮೇರಿಕಾ
ಆ) ರಷ್ಯಾ
ಇ) ಫ್ರಾನ್ಸ್
ಈ) ಗ್ರೀಕ್

3) ಭರತನು ಯಾವ ಗೃಹವನ್ನು ಪ್ರವೇಶಿಸುತ್ತಾನೆ ?

ಅ) ಪ್ರತಿಮೆ
ಆ) ಸಂಕಲ್ಪ
ಇ) ಕಲಾ
ಈ) ಪ್ರತಿಮಾ

4) ಮೈರಾಡ ಸಂಸ್ಥೆಯು ಯಾವ ವರ್ಷದಂದು ಸ್ವಸಹಾಯ ಗುಂಪಿನ ಸದಸ್ಯರ ಮಹಿಳಾ ಸಬಲೀಕರಣದ ಬಗ್ಗೆ ಅಧ್ಯಯನ ಪ್ರಾರಂಭ ಮಾಡಿದೆ ?

ಅ) 2000
ಆ) 2001
ಇ) 2004
ಈ) 2002

5) 'ದಿ ಮಂಚೂರಿಯನ್ ಕ್ಯಾಂಡಿಡೇಟ್' ಪುಸ್ತಕ ಬರೆದವರು ಯಾರು ?

ಅ) ಜಾರ್ಜ್ ಆರ್ವೆಲ್
ಆ) ರಿಚರ್ಡ್ ಕಾಂಡೋನ್
ಇ) ಡಿ. ಹೆಚ್. ಲಾರೆನ್ಸ್
ಈ) ವಿಲಿಯಂ ವರ್ಡ್ಸ್‌ವರ್ತ್

---